

ಅದರಲ್ಲಿ ನಿಜವಾದ ಚಿನ್ನದ ಎಲೆಗಳು (ರೇಖು), ಬೆಳ್ಳಿ, ಪ್ಲಾಟಿನಂ ಮತ್ತು ಚಿನ್ನದ ಬಣ್ಣದ ಮೆಟಾಲಿಕ್ ಪೇಂಟ್‌ಗಳನ್ನು ಬಳಸಲಾಗಿದೆ. ಕಲಾಕೃತಿಯಲ್ಲಿರುವ ಪುರುಷ–ಸ್ತ್ರೀಯರ ಸಣ್ಣ ಪುತ್ಥಳಿಗಳನ್ನು ಚಿತ್ರದ ಪಕ್ಕದಲ್ಲಿ ಮಾಡಿಟ್ಟು, ಪೇಂಟಿಂಗ್‌ನಲ್ಲಿ ಇರುವುದೇನು ಎನ್ನುವುದನ್ನು ಜನಸಾಮಾನ್ಯರಿಗೆ ಅರ್ಥವಾಗಿಸುವ ಪ್ರಯತ್ನ ಮಾಡಲಾಗಿದೆ. ಅಂಧರಿಗಾಗಿ ಬ್ರೈಲ್ ಲಿಪಿಯ ರೂಪದಲ್ಲಿಯೂ ಆ ಕಲಾಕೃತಿಯ ಸ್ವರೂಪವನ್ನು ಬಿಡಿಸಿಡಲಾಗಿದೆ.

ಗಂಡಸಿನ ಬಲಿಷ್ಠ ಭುಜ ಮತ್ತು ತಲೆಯ ಹಿಂಭಾಗ ಕಾಣುತ್ತದಾದರೂ ಆತನ ಮುಖ ಆ ಚಿತ್ರದಲ್ಲಿಲ್ಲ. ತನ್ನೆಡೆ ಕೆನ್ನೆ ನೀಡಿ ಮೊಣಕಾಲೂರಿ ಕುಳಿತ ತರುಣಿಯನ್ನು ಭಾವೋನ್ಮತ್ತನಾಗಿ ಅವಿರತವಾಗಿ ಚುಂಬಿಸುತ್ತ ಮೊಣಕಾಲೂರಿ ಕುಳಿತ ಆತ ತನ್ನ ಸುತ್ತಲಿನ ಪ್ರಪಂಚದಿಂದ ಮುಖವನ್ನು ಬೇರೆಡೆ ತಿರುಗಿಸಿದಂತೆ ಕಾಣುತ್ತಾನೆ. ಆತನ ಇಡೀ ದೇಹ ಚಿನ್ನದ ಬಣ್ಣದ ಅತ್ಯಾಧುನಿಕ ಚಿತ್ತಾರಗಳಿರುವ ದೊಡ್ಡ ಮೇಲ್ಮುಸುಕಿನಲ್ಲಿ ಮುಚ್ಚಿಹೋಗಿದೆ. ಕೆನ್ನೆ ಕೊಟ್ಟು ತಲ್ಲೀನತೆಯಿಂದ ಚುಂಬನವನ್ನು ಸ್ವೀಕರಿಸುತ್ತ ಕುಳಿತ ಹೆಣ್ಣಿನ ಮುಖ, ಭುಜ, ಕೈ ಮತ್ತು ಕಾಲುಗಳು ಕಾಣುತ್ತವಾದರೂ ತೆಳುವಾದ ಪಾರದರ್ಶಕ ಚಿನ್ನದ ಪರದೆಯಂತಹ ನಿಲುವಂಗಿಯಲ್ಲಿ ಅವಳ ಶರೀರ ಹುದುಗಿದೆ. ಪುಟ್ಟ ಪುಟ್ಟ ಹೂಗಳು ಅವಳ ಕೇಶಕ್ಕೆ ಶೃಂಗಾರವಾಗಿವೆ. ಲಜ್ಜೆ ತುಂಬಿದ ಕಾಮೋದ್ರೇಕವೇ ಅವಳ ಮುಖ ಅಲಂಕಾರ. ಚಿನ್ನದ ಪರದೆಯಂತಹ ಅವಳ ಮೇಲುಡುಪಿನಲ್ಲಿ ಸುರುಳಿ ವೃತ್ತಗಳಿದ್ದು, ಅವು ಅವಳ ದೈಹಿಕ ಚೈತನ್ಯದ ಹರಿವಾಗುತ್ತ ಅವರಿಬ್ಬರೂ ಕುಳಿತ ಪುಟ್ಟ, ಪುಟ್ಟ ಬಣ್ಣದ ಹೂಗಳಿರುವ ಹಸಿರು ದಿಬ್ಬದ ಮೇಲೂ ಚೆಲ್ಲಿ ಹರಡಿಕೊಂಡಂತೆ ತೋರುತ್ತದೆ. ಚಿತ್ತಾರಗಳಿರುವ ಚಿನ್ನದ ಬಣ್ಣದ ಕೇಪಿನಂತಹ ಪರದೆಯೊಂದು ಚಿತ್ರದಲ್ಲಿನ ಹೆಣ್ಣಿನ ಹಿನ್ನೆಲೆಯಾಗುತ್ತದೆ. ಅವಳ ಒಂದು ಕೈ ಅವನ ಬಲಿಷ್ಠ ಕತ್ತನ್ನು ತಬ್ಬಿ ಚುಂಬನದ ನಾಚಿಕೆಯಲ್ಲಿ ಅರೆಬರೆ ಬೆರಳುಗಳನ್ನು ಮಡಚಿಕೊಂಡಂತೆ ಚಿತ್ರಿತವಾದರೆ, ಇನ್ನೊಂದು ಕೈ ಅವಳ ಮುಖವನ್ನು ತನ್ನೆಡೆ ತಿರುಗಿಸಿಕೊಂಡ ಆತನ ಕೈಯನ್ನು ಹಿಡಿದಿದೆ. ಅವಳ ಪಾದದ ಬೆರಳುಗಳು ಮೈನವಿರಿನ ಉದ್ರೇಕದಲ್ಲಿ ಎಂಬಂತೆ ಕೂತ ನೆಲವನ್ನು ಒತ್ತಿ ಕೂತಿವೆ. ಅವನ ಮತ್ತೊಂದು ಹಸ್ತ ಆ ತರುಣಿ ತನ್ನಿಂದ ದೂರ ಸರಿಯದಂತೆ ಹೂ ಮುಡಿದ ಅವಳ ತಲೆಯನ್ನು ಆತು ಹಿಡಿದಿದೆ. ಚಿನ್ನದ ಹೊಳಪಿನಲ್ಲಿ ಅವರಿಬ್ಬರ ಮುತ್ತಿನ ಬಿಸಿಗೆ ತಾರೆಗಳು ತುಂಬಿದ ರಾತ್ರಿಯ ಆಗಸವೂ ಕಾವೇರಿ ಕೆಂಪಾದಂತೆ ಕಂದು ವರ್ಣದಲ್ಲಿ ಚಿತ್ರಿತವಾಗಿದೆ. ಅವರು ಕುಳಿತ ಹಸಿರು ನೆಲ ಮತ್ತು ಬಣ್ಣದ ಹೂವುಗಳು ಚಿನ್ನದ ಹೊಳಪಿನಿಂದ ಕೂಡಿವೆ. ಆ ಹೆಣ್ಣಿನ ಚಿನ್ನದ ಪರದೆಯಿಂದ ಬಿಳಲಿನಂತೆ ಭೂಮಿಗೂ ಇಳಿವ ಚೈತನ್ಯ ಪ್ರಕೃತಿಯಲ್ಲಿ ರೋಮಾಂಚನ ಗರಿಗೆದರಿಸಿದ ಚಿತ್ರಣವಿದೆ. ‘ಕಿಸ್’ ಕ್ಲಿಂಟ್‌ನ ಮತ್ತೊಂದು ಕಲಾಕೃತಿ ‘ಟ್ರೀ ಆಫ್ ಲೈಫ್’ ಅನ್ನು ನೆನಪಿಸುತ್ತದೆ ಎಂದು ಹೇಳುವವರೂ ಇದ್ದಾರೆ.

ಗಂಡು ಹೆಣ್ಣಿನ ಚುಂಬನದ ಎಲ್ಲ ನವಿರು ಉದ್ರೇಕವನ್ನು ಸೆರೆಹಿಡಿದ ಕಲಾಕೃತಿ ಪ್ರಸಿದ್ಧವಾಗಿರುವುದು ಕಲೆಯಲ್ಲಿನ ತನ್ನ ನಾವೀನ್ಯತೆಯ ಕಾರಣ. ಕಲಾಕಾರ ಕ್ಲಿಂಟ್ ‘ಕಿಸ್’ನಂತೆಯೇ ತನ್ನ ಹಲವು ಕಲಾಕೃತಿಗಳಲ್ಲಿ ಚಿನ್ನ, ಬೆಳ್ಳಿ ಮತ್ತು ಪ್ಲಾಟಿನಂನಂತಹ ದುಬಾರಿ ವಸ್ತುಗಳನ್ನು ಬಳಸಿದ್ದಾನೆ. ಆರಂಭದಲ್ಲಿ ಸಾಂಪ್ರದಾಯಿಕ ಶೈಲಿಯಲ್ಲಿಯೇ ಚಿತ್ರ ಬರೆದ ಕ್ಲಿಂಟ್, 1900ರ ನಂತರ ತನ್ನದೇ ಶೈಲಿಯಲ್ಲಿ ಚಿತ್ರ ರಚಿಸತೊಡಗಿದ. ಅಂದಿನ ವಿಕ್ಟೋರಿಯನ್ ಸಮಾಜ ಅವನು ಬರೆದ ಕೆಲವು ಚಿತ್ರಗಳನ್ನು ‘ಲೈಂಗಿಕ ಉದ್ರೇಕಕಾರಿ’ ಎಂದು ಆರೋಪಿಸಿತ್ತು. ತನ್ನ ಪ್ರತಿಮಾತ್ಮಕ ಕಲಾ ಪ್ರಕಾರಕ್ಕೆ ಹೆಸರುವಾಸಿಯಾದ ಆತನ ಮೇಲೆ ಜಪಾನೀಯರ ಕಲೆಯ ಪ್ರಭಾವವೂ ಇತ್ತೆನ್ನುತ್ತಾರೆ. 1862ರಲ್ಲಿ ಹುಟ್ಟಿದ ಗುಸ್ತಾವ್ ಕ್ಲಿಂಟ್ 1918ರವರೆಗೆ ಬದುಕಿದ್ದ.

1890ರಲ್ಲಿ ಕ್ಲಿಂಟ್ ಆಸ್ಟ್ರಿಯಾದ ಫ್ಯಾಷನ್ ಡಿಸೈನರ್ ಮತ್ತು ತನ್ನ ಅತ್ತಿಗೆಯ ತಂಗಿಯಾದ ಎಮಿಲಿ ಲೂಯಿಸ್ ಫ್ಲೋಜ್‌ಳನ್ನು ಭೇಟಿಯಾದ, ಅವಳನ್ನು ಪ್ರೀತಿಸಿದ. ಚಿತ್ರದಲ್ಲಿರುವ ಹೆಣ್ಣು ಮತ್ತು ಗಂಡು ಅವರಿಬ್ಬರೇ ಎಂದು ಹೇಳುವವರೂ ಇದ್ದಾರೆ. ಫ್ಲೋಜ್‌ಳಿಗಾಗಿ ಗುಸ್ತಾವ್ ವಸ್ತ್ರ ವಿನ್ಯಾಸವನ್ನೂ ಮಾಡಿಕೊಡುತ್ತಿದ್ದು, ಆಕೆ ಅವುಗಳನ್ನು ಪ್ರದರ್ಶಿಸುತ್ತಿದ್ದಳಂತೆ. ಅವರಿಬ್ಬರೂ ಕೊನೆಯವರೆಗೂ ಜೊತೆಯಲ್ಲಿದ್ದರಂತೆ. ಆತ

